CLAUSE-4

MR. DEPUTY SPEAKER.—The question is :

"That Clause 4 do stand part of the Bill."

The Motion was adopted

Clause 4 was added to the Bill.

CLAUSE-1 etc.,

MR. DEPUTY SPEAKER.—The question is :

"That Clause 1, the Long Title, the Preamble and the Enacting Formula do stand part of the Bill."

The Motion was adopted

Clause 1, the Long Title the Preamble and the Enacting Formula were added to the Bill.

Motion to Pass

SRI G. H. ASHWATH REDDY.—Sir, I beg to move :

"That the Karnataka Electricity (Taxation on Consumption) (Amendment) Bill, 1982 be passed."

MR. DEPUTY SPEAKER.—The question is :

"That the Karnataka Electricity (Taxation on Consumption) (Amendment) Bill, 1982 be passed."

The motion was adopted and the Bill was passed

THE CODE OF CRIMINAL PROCEDURE (AMENDMENT BILL, 1982.

Motion to Consider

SRI Y. RAMAKRISHNA (Minister for Law and Parliamentary Affairs).—Sir, I beg to move :

"That the Code of Criminal Procedure (Amendment) Bill, 1982 be taken into consideration."

The question was proposed

ಶ್ರೀ ವೈ. ರಾಮಕೃಷ್ಣ.—(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು) ಸನ್ಮಾನ್ಯ ಅಧ್ಯಕ್ಷರೆ ಈ ತಿದ್ದುಪಡಿಯನ್ನು ತಂದಿರತಕ್ಕ ಉದ್ದೇಶ ಸೆಕ್ಷನ್ 321ನೇ ಕ್ರಿಮಿನಲ್ ಪ್ರೊಸೀಜರ್ ಕೋಡ್ ಪ್ರಕಾರ ಹೈಕೋರ್ಟ್‌ನಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರ್ ನೇಮಕ ಮಾಡುವಾಗ ಮೊದಲು ಹೈಕೋರ್ಟಿನ ಜೊತೆ ಸಮಾಲೋಚನೆ ಮಾಡಿ ಆನಂತರ ನಾವು ಪಬ್ಲಿಕ್ ಪ್ರಾಸಿಕ್ಯೂಟರ್ ಅಪಾಯಿಂಟ್‌ಮೆಂಟ್ ಮಾಡತಕ್ಕ ಪ್ರಮೇಯ ಇತ್ತು. ಈ ಒಂದು ತಿದ್ದುಪಡಿ ಮೂಲಕ ಇನ್ನು ಮುಂದೆ

ಹೈಕೋರ್ಟಿನ ಜೊತೆ ಸಮಾಲೋಚನೆ ಮಾಡದ್ದೇನೆ ನಮಗೆ ಯಾರು ಚೀಫ್ ಲೀಗಲ್ ಅಡ್ವೈಸರ್ ಇದ್ದಾರೆ, ಹೈಕೋರ್ಟಿನಲ್ಲಿ ಆಡ್ವೊಕೇಟ್ ಜನರಲ್ ಅಂಥವರನ್ನು ಕೇಳಿ ನಾವು ಮಾಡತಕ್ಕದ್ದು ಅಂಥ ತಂದಿರತಕ್ಕ ಸಣ್ಣ ತಿದ್ದುಪಡಿ, ಇದಕ್ಕೆ ಸಭೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—(ತಿವಮೊಗ್ಗ) ಸನ್ಮಾನ್ಯ ಅಧ್ಯಕ್ಷರೆ, ಸರ್ಕಾರ ಕರ್ತವ್ಯ ನಿರ್ವಹಣೆ ಮಾಡಲು ಸಹಾಯಕವಾಗುವಂತೆ ತಿದ್ದುಪಡಿ ತರುವುದಕ್ಕೆ ನಮ್ಮ ವಿರೋಧ ಇಲ್ಲ. ಈಗ ಒಂದು ಪ್ರಶ್ನೆ ಏನು ಎಂದರೆ ಸರ್ಕಾರದ ಪರವಾಗಿ ವಿವಿಧ ಹಂತಗಳಲ್ಲಿ ನ್ಯಾಯಾಲಯಗಳಲ್ಲಿ ಕರ್ತವ್ಯ ನಿರ್ವಹಿಸುವೇಕಾದಂಥ ವ್ಯಕ್ತಿಗಳಿಗೆ ಕೆಲವೊಂದು ಕನಿಷ್ಟ ಅರ್ಹತೆಗಳು ಇರಬೇಕು. ಆ ಸರ್ಕಾರ ಮತ್ತೊಂದು ಸರ್ಕಾರ ಆ ಅಭಿಪ್ರಾಯದಲ್ಲಿ ನಾನು ಹೇಳುವುದಿಲ್ಲ. ಸರ್ಕಾರದ ಆಶ್ರಯ ಪಡೆದು ಸರ್ಕಾರದ ಪರವಾಗಿ ನ್ಯಾಯಾಲಯದಲ್ಲಿ ಹಾಜರಾಗತಕ್ಕ ಅಧಿಕಾರವನ್ನು ಏನು ಪಡೆದುಕೊಳ್ಳುತ್ತಾರೆ, ಅನೇಕ ಸಂದರ್ಭಗಳಲ್ಲಿ ನಾವು ನೋಡಿದ್ದೇವೆ. ಅವರು ಸರ್ಕಾರದ ಹಿತವನ್ನು ರಕ್ಷಣೆ ಮಾಡುವುದರಲ್ಲಿ ವಿಫಲರಾಗುತ್ತಾರೆ. ಎರಡು ಮೂರು ಕಾರಣಗಳಿಂದ ಅವರು ವಿಫಲರಾಗುತ್ತಾರೆ. ಒಂದನೆಯದಾಗಿ ಹೇಳಬೇಕು ಎಂದರೆ, ಖಾಸಗಿ ವ್ಯಕ್ತಿಗಳು ಅಥವಾ ಸಂಸ್ಥೆಗಳು ಸರ್ಕಾರದ ವಿರುದ್ಧ ನ್ಯಾಯಾಲಯಕ್ಕೆ ಹೋಗುತ್ತಾರೆ. ಖಾಸಗಿ ವ್ಯಕ್ತಿಗಳು ಅಥವಾ ಸಂಸ್ಥೆಗಳು ಕಾನೂನಿನಲ್ಲಿ ಬಹಳ ಪಾಂಡಿತ್ಯ ಇರತಕ್ಕಂಥವರನ್ನು ಒಳ್ಳೆಯ ಅನುಭವ ಇರತಕ್ಕಂಥವರನ್ನು, ಯಾವುದೇ ಒಂದು ವಾದವನ್ನು ಬಹಳ ಸಾಮರ್ಥ್ಯ ರೀತಿಯಲ್ಲಿ ನ್ಯಾಯಾಲಯದ ಮುಂದೆ ಮಂಡಿಸತಕ್ಕವರನ್ನು ನೇಮಕ ಮಾಡಿಕೊಳ್ಳುತ್ತಾರೆ. ಎಷ್ಟೋ ಸಾರಿ ಸರ್ಕಾರದಿಂದ ನೇಮಕ ವಾದಂಥವರು ಅವರ ಸಾಮರ್ಥ್ಯದ ಕೊರತೆಯಿಂದಲೂ, ಇನ್ನು ಕೆಲವರು ಸರ್ಕಾರಕ್ಕೆ ತಾನು ನಿಷ್ಠೆಯಾಗಿರಬೇಕು ಅನ್ನತಕ್ಕದ್ದು ಇಲ್ಲ. ಇದಕ್ಕೆ ಎಷ್ಟೋ ಉದಾಹರಣೆ ಕೊಡಬಹುದು. ಸರ್ಕಾರದ ಪರವಾಗಿ ವಾದ ಮಾಡುವುದನ್ನು ಬಿಟ್ಟುಕೊಂಡು ಏನು ಸರ್ಕಾರದ ವಿರುದ್ಧ ನ್ಯಾಯಾಲಯಕ್ಕೆ ಬಂದಿದ್ದಾರೆ ಅವನಿಗೆ ಪೋಷಕವಾಗುವಂತೆ ರೀತಿಯಲ್ಲಿ, ಅಲ್ಲದೇ ಇವರು ಸರ್ಕಾರವನ್ನು ಒಮ್ಮೊಮ್ಮೆ ಕೇಳದೆ ತಾವೇ ನ್ಯಾಯಾಲಯದಲ್ಲಿ ಕಮಿಟ್ ಮಾಡಿಕೊಳ್ಳತಕ್ಕದು ಸಾಮಾನ್ಯ ಇದೆ. ಸಮಯ ಇದ್ದರೆ ಆದರ ಬಗ್ಗೆ ಒಂದು ಪಟ್ಟಿಕೊಡುತ್ತೇನೆ. ಎಷ್ಟೋ ಕೇಸುಗಳಲ್ಲಿ ಈ ರೀತಿ ಆಗುತ್ತಿದೆ. ಆದ್ದರಿಂದ, ಹೈಕೋರ್ಟ್ ನವರನ್ನು ಕನ್‌ಸಲ್ಟ್ ಮಾಡಿದರೆ ಕೊನೇ ಪಕ್ಷ ಅವರಿಗೆ ಹೈಕೋರ್ಟಿನಲ್ಲಿ ಯಾರು ಸ್ವಲ್ಪ ಉತ್ತಮವಾದಂಥ ಕ್ಯಾಲಿಬರ್, ಸಾಮರ್ಥ್ಯ ಇದೆ. ಸರ್ಕಾರದ ಜವಾಬ್ದಾರಿಗಳನ್ನು ನೋಡಿಕೊಳ್ಳುವುದಕ್ಕೆ ಪರವಾಯಿಲ್ಲ ಅಂಥ ಅನಿಸುತ್ತದೆ ಆ ಒಂದು ಅಭಿಪ್ರಾಯವನ್ನು ಅವರು ಕೊಡಲಿಕ್ಕೆ ಸಾಧ್ಯ ನೀವು ಅವರದೇ ಅಭಿಪ್ರಾಯದ ಮೇಲೆ ಹೋಗಬೇಕೆಂದು ಇಲ್ಲ. ಅವರನ್ನು ಕನಸಲ್ಟ್ ಮಾಡಿ ಅಂದರೆ ಅವರು ಕೊಟ್ಟಿದ್ದನ್ನು ಮಾಡಲೇಬೇಕು ಅಂಥ ಅಲ್ಲ. You have discretionary power. Even after consulting the High Court you can certainly nominate according to your own choice. ಇಲ್ಲಿ ಪ್ರಶ್ನೆ ಏನು ಎಂದರೆ ಕೊನೇ ಪಕ್ಷ ಹೈಕೋರ್ಟಿನವರನ್ನು ಕೇಳಿದರೆ ಅವರು ಈ ಹೆಸರು ಹೇಳಿದರೆ ಆದರೊಳಗೆ ಯಾವುದಾದರೂ ಒಂದು ಹೆಸರು ಆರಿಸಿಕೊಳ್ಳಬಹುದು. ಅದನ್ನು ಬಿಟ್ಟು ಸರ್ಕಾರಕ್ಕೆ ಅಧಿಕಾರ ಮಾಡಿಕೊಂಡರೆ ಏನಾಗುತ್ತದೆ ಎಂದರೆ, ನಾನಾ ರೀತಿಯ ವಸೂಲಿಬಾಜಿ ಆಗುತ್ತದೆ ಯೋಗ್ಯತೆ ಇರಲಿ ಬಿಡಲಿ ಪ್ರೊಫಾರ್ಮ ಫೀಜ್ ತನ್ನಷ್ಟಕ್ಕೆ ತಾನೇ ಬರುತ್ತದೆ. ಎದ್ದು ನಿಂತುಕೊಂಡು ಮೈ ಲಾರ್ಡ್ ಅಂದರೆ ಸಾಕು. ಅದು ಬರುತ್ತಾ ಇರುತ್ತವೆ ಎನ್ನುವ ಒಂದೇ ಕಾರಣಕ್ಕೋಸ್ಕರ ಸರ್ಕಾರದ ಪ್ರತಿನಿಧಿಗಳಾಗಿಂತ್ತಾರೆ. ಎಷ್ಟೋ ಸಂದರ್ಭದಲ್ಲಿ ಸರ್ಕಾರದ ಹಿತರಕ್ಷಣೆಯಾಗುವುದಿಲ್ಲ. ಈ ದೃಷ್ಟಿಯಿಂದ ಇದರ ಅಗತ್ಯವಿದೆಯೇ? ಅಥವಾ ಈಗಿರತಕ್ಕ ರೀತಿಯಲ್ಲಿ ಹೈಕೋರ್ಟಿನವರನ್ನು ಕೇಳುವುದರಲ್ಲಿ ನೀವು ಕಳೆದುಕೊಳ್ಳುವುದಾದರೂ ಏನು? ಇದರಲ್ಲಿ ಡಿಲೇ ಆಗುತ್ತದೆಂದು ನಿಮಗೆ ತಿಳಿದಿರುವುದರೆ ಮುಖ್ಯ ನ್ಯಾಯಾಧೀಶರನ್ನೇ ಕನ್‌ಸಲ್ಟ್ ಮಾಡಿ ಇಷ್ಟು ದಿವಸದಲ್ಲಿ ಇದನ್ನು ಕಳುಹಿಸಿಕೊಡಿ ಎಂದು ಕೇಳಬಹುದಲ್ಲವೆ? ಸರ್ಕಾರಕ್ಕೆ ಏನು ತೊಂದರೆ ಇದೆ, ಏನು ಅಡಚಣೆ ಇದೆ ಎಂಬುದನ್ನು ವಿವರವಾಗಿ ಹೇಳಿ. ಸರ್ಕಾರದ ಹಿತರಕ್ಷಣೆಯನ್ನು ಮಾಡುವ ದೃಷ್ಟಿಯಿಂದ ಈ ಅಲೋಚನೆಯನ್ನು ಮಾಡಿ. ಇಲ್ಲದೇ ಹೋದರೆ ಏನಾಗತ್ತದೆಂದರೆ, ಹೈಕೋರ್ಟ್‌ನಲ್ಲಿ ಒಂದು ದಿವಸವೂ ಒಂದೇ ಒಂದು ಕೇಸನ್ನೂ ನಡೆಸದೇ ಇರುವವರು ಇಲ್ಲಿ ಬಂದು ಯಾರದ್ದೋ ವಸೂಲಿಬಾಜಿಯ ಮೇಲೆ ದಿಢೀರ್ ಅಂತ ಹೈ ಕೋರ್ಟಿನಲ್ಲಿ ಸರ್ಕಾರದ ಆಡ್ವೋಕೇಟ್ ಆಗುತ್ತಾರೆ. ಸ್ವಲ್ಪ ಪೆಕರಪೆಕರನಾಗಿ ಮಾತನಾಡಿದರೆ ಎಷ್ಟೋ ಸಂದರ್ಭಗಳಲ್ಲಿ ಕೇಸುಗಳು ಹೈ ಕೋರ್ಟ್‌ನಲ್ಲಿ ಸರ್ಕಾರದ ವಿರುದ್ಧ ಆಗಿರುವುದನ್ನು ನಾವೇ ನೋಡಿದ್ದೇವೆ. ಇದನ್ನೆಲ್ಲಾ ಅನುಭವಿಸಿದ್ದೇವೆ. ಎಷ್ಟೋ ಸಲ ನಮ್ಮ ಲಾ ಡಿಪಾರ್ಟ್‌ಮೆಂಟ್‌ನ್ನೂ ಕೂಡ ಕೇಳದೆ ನಮ್ಮ ಸರ್ಕಾರ

ದವರನ್ನೂ ಕೇಳದೆ ಹೈ ಕೋರ್ಟಿನಲ್ಲಿ ಸರ್ಕಾರದ ಪರವಾಗಿ ವಾದ ಮಾಡುವುದನ್ನು ಬಿಟ್ಟು ತಮಗೆ ತೋಚಿದ ರೀತಿಯಲ್ಲಿ ಕಮಿಟ್‌ಮೆಂಟ್ ಮಾಡಿಕೊಂಡು ಬಂದಿದ್ದಾರೆ. ಇದರಿಂದಾಗಿ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ನಷ್ಟವಾಗಿರುವುದನ್ನು ನಾವು ನೋಡಿದ್ದೇವೆ. ನಾನು ಮಂತ್ರಿಯಾಗಿದ್ದಾಗ ಕೂಡ ೨–೩ ಸಂದರ್ಭಗಳಲ್ಲಿ ಇಂಥಾದ್ದನ್ನು ನೋಡಿದ್ದೇನೆ ಆದ್ದರಿಂದ ನಾನು ಇದನ್ನು ಹೇಳುತ್ತಿರುವುದು ಈಗಿರುವ ಕಾನೂನಿನಲ್ಲಿ ಏನು ತೊಂದರೆಯಿದೆಯೆಂದು ತಾವು ಈ ಶಿಷ್ಟು ಪಡಿಯನ್ನು ಮಾಡತ್ತಿದ್ದೀರಿ? ಇದನ್ನೆಲ್ಲಾ ಯೋಚನೆ ಮಾಡಿ, ಇದು ಅನಿವಾರ್ಯವೆಂದು ಕಂಡುಬಂದರೆ, ಅಥವಾ ಇದು ಅಗತ್ಯವಾಗಿ ಆಗಲೇಬೇಕೆಂದು ತಾವು ಹೇಳುವುದಾದರೆ ಆದನ್ನು ಮಾಡಿಕೊಳ್ಳಿ. ನಾವು ಬೇಡವೆಂದು ಹೇಳುವುದಿಲ್ಲ.

ಶ್ರೀ ಪೆಚ್. ಗಂಗಾಧರ್‌ನ್.—ನಿಮ್ಮ ಉದ್ದೇಶದಲ್ಲಿ ಹೇಳಿದ್ದೀರಿ, ನಿಮ್ಮ ಆಡ್ವೋಕೇಟ್ ಜನರಲ್ ರವೆರನ್ನು ಕನ್‌ಸಲ್ಟ್ ಮಾಡಿ ಅಪಾಯಿಂಟ್ ಮಾಡುತ್ತೇವೆಂದು. ಆದರೆ ಈ ಆಕ್ಟ್‌ನಲ್ಲಿ ಅಂಥಾದ್ದು ಎಲ್ಲೂ ಕಂಡುಬರುತ್ತಿಲ್ಲ. ನೀವು ಅಡೋಕೇಟ್ ಜನರಲ್‌ರವರನ್ನು ಕನ್‌ಸಲ್ಟ್ ಮಾಡಿ ಮಾಡುತ್ತೀರೆಂಬುದಕ್ಕೂ ಇಲ್ಲಿ ಗ್ಯಾರಂಟಿ ಇಲ್ಲ. ಇದುವರೆಗೂ ಹೈ ಕೋರ್ಟ್‌ನವರ ಅಭಿಪ್ರಾಯವನ್ನು ತೆಗೆದು ಕೊಂಡು ಅಪಾಯಿಂಟ್‌ಮೆಂಟ್ ಮಾಡುತ್ತಿದ್ದಿರಿ. ಇದು ಬಹಳ ದಿವಸಗಳಿಂದ ನಡೆದುಕೊಂಡು ಇದರಲ್ಲಿ ನಿಮಗೆ ಏನು ತೊಡಕಾಗಿದೆ. ಹೈ ಕೋರ್ಟ್‌ನವರ ಅಭಿಪ್ರಾಯವನ್ನು ಮೀರಿಗೆ ಪಬ್ಲಿಕ್ ಪ್ರಾಸಿಕ್ಯೂಟರ್‌ನ್ನು ನೇಮಕ ಮಾಡಿದ್ದರೆ ಏನು ತೊಂದರೆಯಾಗುತ್ತಿತ್ತು ಯಾವ ಕಾರಣಕ್ಕೋಸ್ಕರ ಬದಲಾವಣೆ ಮಾಡಂತ್ತಿದ್ದೀರೆಂದು ನಮಗೆ ಅರ್ಥವಾಗುತ್ತಿಲ್ಲ. ಹಿಂದಿನಿಂದ ನಡೆದುಕೊಂಡು ಬಂದಿದ್ದನ್ನೇ ಮುಂದು ವರಿಸಿಕೊಂಡು ಹೋಗಿ. ಏನೂ ಗೊತ್ತಿಲ್ಲದವರಿಗೆ ಇದನ್ನು ಕೊಟ್ಟು ಸರ್ಕಾರದ ವಿರುದ್ಧವಾಗಿ ತೀರ್ಪುಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುವುದು ಬೇಡ. ಆದ್ದರಿಂದ ಈ ಬಿಲ್ಲನ್ನು ವಾಪಸು ತೆಗೆದುಕೊಳ್ಳುವುದು ಒಳ್ಳೆಯದು.

ಶ್ರೀ ವೈ ರಾಮಕೃಷ್ಣ ...ಈಗ ಮಾನ್ಯ ಶ್ರೀನಿವಾಸ್‌ರವರೂ ಮತ್ತು ಗಂಗಾಧರನ್‌ರವರೂ ಬಂದೆರಡು ವಿಚಾರವನ್ನು ಹೇಳ್ತಿದ್ದಾರೆ. ಮೊದಲನೆಯದಾಗಿ ಸರ್ಕಾರ ತನ್ನ ಇಚ್ಛೆಬಂದಂತೆ, ತನ್ನ ಇಚ್ಛೆಗೆ ಬಂದವರನ್ನು ನೇಮಕ ಮಾಡುವುದಕ್ಕೆ ಸಾಧ್ಯವಿಲ್ಲ. ವಿಧ್ಯಾರ್ಹತೆಗಳನ್ನು ನೋಡಬೇಕಾಗುತ್ತದೆ ಅವರು ಎಷ್ಟು ದಿವಸ ವಕೀಲಿ ವೃತ್ತಿ ನಡೆಸಿರಬೇಕು. ಇವೂ ಮುಂತಾದುವುಗಳ ಬಗ್ಗೆ ಈಗಾಗಲೇ ಒಂದು ಕಾನೂನು ಇದೆ. ಅದನ್ನನುಸರಿಸಿಯೇ ನಾವೂ ಕೂಡ ಮಾಡಬೇಕಾಗುತ್ತದೆ. ಗೌರ್ನಮೆಂಟ್ ಪ್ಲೀಡರ್ ಆಗುವುದಕ್ಕೆ ಇಷ್ಟು ದಿವಸ ಕೆಲಸಮಾಡಿರಬೇಕು, ಪಬ್ಲಿಕ್ ಪ್ರಾಸಿಕ್ಯೂಟರ್ ಆಗುವುದಕ್ಕೆ ಇಷ್ಟು ದಿವಸ ಕೆಲಸ ಮಾಡಿರಬೇಕೆಂದು ಇರುತ್ತದೆ, ಅದನ್ನನುಸರಿಸಿಯೇ ನಾವು ಮಾಡಬೇಕಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸ್ವಾಮಿ, ೧೦ ವರ್ಷದಿಂದ ಕೋರ್ಟಿಗೆ ಹೋಗುತ್ತಿದ್ದರೂ ಒಂದೇ ಒಂದು ವಾದ ಮಾಡದಿರುವವರೂ ಇದ್ದಾರೆ.

SRI. A. LAKSHMISAGAR.—Sir, there are rules governing the appointment of Government Pleaders and Government Advocates. Is the Minister prepared to accept the mistake he has committed in transgressing those very rules?

SRI Y. RAMAKRISHNA.—No, I am very sorry.

SRI A. LAKSHMISAGAR.—I can give you the instance. But I cannot mention his name because he is not a Member of this House. There have been rules. But you have flouted those rules with impunity.

SRI Y. RAMAKRISHNA.—Please quote one instance where I have violated the rules I am prepared to accept the challenge. ಇದನ್ನು ತಂದಿರತಕ್ಕ ಉದ್ದೇಶ ಹೈ ಕೋರ್ಟಿನಲ್ಲಿ ಯಾರು ಪ್ರಾಕ್ಟೀಸ್ ಮಾಡುತ್ತಾರೆ ಅಂಥವರು ಮಾತ್ರ ಹೈ ಕೋರ್ಟ್ ಜಡ್ಜ್‌ಗಳ ಕಣ್ಣಿಗೆ ಬೀಳುತ್ತಾರೆ. ಡಿಸ್ಟ್ರಿಕ್ಟ್ ಕೋರ್ಟ್‌ಗಳಲ್ಲಿ ಸೆಷನ್ಸ್ ಕೋರ್ಟ್‌ಗಳಲ್ಲಿ ಕೇಸುಗಳನ್ನು ನಡೆಸಿ ಯಾರು ಪರಿಣತರು ಇರುತ್ತಾರೆ ಅಂಥವರಿಗೆ ಇಲ್ಲಿ ಅವಕಾಶ ಸಿಕ್ಕು

ವುದಿಲ್ಲ. ಏಕೆಂದರೆ ಅವರು ಹೈ ಕೋರ್ಟಿಗೆ ಬರುವುದಿಲ್ಲ. ಅವರು ಏನಿದ್ದರೂ ಕೇವಲ ಡಿಸ್ಟ್ರಿಕ್ಟ್ ಕೋರ್ಟ್‌ಗಳಲ್ಲಿ ಸೆಷನ್ಸ್ ಕೋರ್ಟ್‌ಗಳಲ್ಲಿ ಮಾತ್ರ ವಕೀಲವೃತ್ತಿ ಮಾಡುತ್ತಿರುತ್ತಾರೆ. ಅವರು ಆಗಾಗ್ಗೆ ಹೈ ಕೋರ್ಟ್‌ಗೆ ಬಂದು ನ್ಯಾಯಾಧೀಶರ ಎದುರಿನಲ್ಲಿ ವಾದ ಮಾಡುವುದಿಲ್ಲ. ಆದ್ದರಿಂದ ಅವರು ನ್ಯಾಯಾಧೀಶರ ಕಣ್ಣಿಗೆ ಬೀಳುವುದಿಲ್ಲ ಸರ್ಕಾರ ತನ್ನ ಕೇಸುಗಳನ್ನು ಗೆಲ್ಲಬೇಕಾದರೆ ಎಂಥವರನ್ನು ನೇಮಕ ಮಾಡಿಕೊಳ್ಳಬೇಕೆಂಬುದು ಸರ್ಕಾರಕ್ಕೆ ಸೇರಿದ್ದು. ನೀವು ಹೇಳುತ್ತಿದ್ದೀರಿ ಕಾರ್ಯಾಂಗ ಬೇರೆ ಬೇರೆ ಇರಬೇಕು, ನ್ಯಾಯಾಂಗ ಬೇರೆ ಇರಬೇಕು, ಕಾರ್ಯಾಂಗದ ಜೊತೆಯಲ್ಲಿ ನ್ಯಾಯಾಂಗ ಪ್ರವೇಶ ಮಾಡಕೂಡದು ಎಂದು. ಇದು ಖಂಡಿತವಾಗಿ ಒಂದು ತತ್ವಬದ್ಧವಾಗಿದೆ. ಸರ್ಕಾರ ತನ್ನ ವಕೀಲರನ್ನು ನೇಮಕ ಮಾಡುವಾಗ ಎಲ್ಲಿರತಕ್ಕ ನಮ್ಮ ಚೀಫ್ ಲೀಗಲ್ ಅಡ್ವೈಸರ್‌ನ್ನು ಕೇಳಿ ನೇಮಕ ಮಾಡುತ್ತೇವೆ. ಏಕೆಂದರೆ ಯಾರಿಂ ಚೆನ್ನಾಗಿ ಕೆಲಸ ಮಾಡುತ್ತಾರೆ. ಯಾರು ಹೆಚ್ಚು ಸಮರ್ಥರಿದ್ದಾರೆಂಬುದು ಅವರಿಗೆ ಗೊತ್ತಿರುತ್ತದೆ. ಆದರೆ ಕಾನೂನು ಉಲ್ಲಂಘನೆಯನ್ನು ಮಾಡಿ ನೇಮಕ ಮಾಡುವುದಕ್ಕೆ ನಾವು ಹೋಗುವುದಿಲ್ಲ. ಈಗಿರತಕ್ಕ ನೇಮಕಾತಿ ಪ್ರೊಸೀಜರ್ ಸರಿಯಾಗಿಲ್ಲದಿರುವುದರಿಂದ ಈ ತಿದ್ದುಪಡಿಯನ್ನು ತಂದಿದ್ದೇವೆಯೇ ಹೊರತು. ಇನ್ನು ಬೇರೆ ಯಾವ ಉದ್ದೇಶದಿಂದಲೂ ತಂದಿಲ್ಲ. ನಪಃಗೆ ಬೇಕಾದವರನ್ನು ಕಾನೂನು ಬಿಟ್ಟು ಮಾಡುವುದಿಲ್ಲ. ಆದ್ದರಿಂದ ಮಾನ್ಯ ಸಭೆ ಇದಕ್ಕೆ ತನ್ನ ಒಪ್ಪಿಗೆಯನ್ನು ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಕೆ. ರಾಮಭಟ್.—ಹಾಗಾದರೆ ಡಿಸ್ಟ್ರಿಕ್ಟ್ ಜಡ್ಜ್‌ರನ್ನು ಕನ್ಸಲ್ಟ್ ಮಾಡಿ ನೇಮಕ ಮಾಡಬಹುದಲ್ಲಾ.

ಶ್ರೀ ವೈ. ರಾಮಕೃಷ್ಣ.—ಪಬ್ಲಿಕ್ ಪ್ರಾಸಿಕ್ಯೂಟರ್ಸ್‌ಗೆ ಅವರನ್ನೇ ಮಾಡುವುದು. ಇದು ಕೇವಲ ಪ್ರಾಸಿಕ್ಯೂಟರ್‌ಗೆ ಸಂಬಂಧಪಟ್ಟಿದ್ದಲ್ಲ. ಇದು ಪಬ್ಲಿಕ್ ಪ್ರಾಸಿಕ್ಯೂಟರ್ ಇನ್ ದಿ ಹೈ ಕೋರ್ಟ್. ಆದ್ದರಿಂದ ಅವರನ್ನು ಕೇಳಿಯೇ ನಾವು ಮಾಡುವುದು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಹೈ ಕೋರ್ಟ್‌ನಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರ್ ಎಲ್ಲಿದ್ದಾರೆ?

ಶ್ರೀ ವೈ ರಾಮಕೃಷ್ಣ.—ಸ್ಟೇಟ್ ಪ್ರಾಸಿಕ್ಯೂಟರ್ ಇದ್ದಾರೆ ಸ್ವಾಮಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಸ್ಟೇಟ್ ಪ್ರಾಸಿಕ್ಯೂಟರ್ ಇದ್ದಾರೆಯೆ?

ಶ್ರೀ ವೈ. ರಾಮಕೃಷ್ಣ. – ಪಬ್ಲಿಕ್ ಪ್ರಾಸಿಕ್ಯೂಟರ್ ಅಲ್ಲವೆ?

SRI K. H SRINIVAS.—I can unders and that these words carry definite identity and meaning I now what is meant by State Prosecutor.

SRI Y. RAMAKRISHNA.—it is the State Prosecutor and not the Publict Prosecutor at the district level. This is the State Prosecutor at the High Court level. ಳ ಜನರಿದ್ದಾರೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಹೈ ಕೋರ್ಟಿನಲ್ಲಿ ಕೆಲಸಮಾಡುವವರು ಹೈಕೋರ್ಟ್ ನ್ಯಾಯಾಧೀಶರ ಕಣ್ಣಿಗೆ ಬೀಳುತ್ತಾರೆ.

ಶ್ರೀ ವೈ. ರಾಮಕೃಷ್ಣ.—ಉದಾಹರಣೆಗೆ ಹೇಳುವುದಾದರೆ, ತಮ್ಮ ಜಿಲ್ಲೆಯಲ್ಲಿ ಒಬ್ಬ ಎಕ್ಸ್ ಪರ್ಟ್ ಇರುತ್ತಾರೆ. ಅವರು ಕ್ರಿಮಿನಲ್ ಕೇಸ್‌ನಲ್ಲಿ ಬಹಳ ಚೆನ್ನಾಗಿ ವಾದ ಮಾಡುತ್ತಾರೆ, ಚೆನ್ನಾಗಿ ತಿಳಿದುಕೊಂಡಿರುತ್ತಾರೆ. ಅಂಥವರಿಗೆ ಅವಕಾಶ ಸಿಕ್ಕುತ್ತಿಲ್ಲ. ಆದ್ದರಿಂದ ಅಂಥವರಿಗೆ ನಾವು ಅವಕಾಶವನ್ನು ಕಲ್ಪಿಸಿಕೊಡಬೇಕಾಗಿರುತ್ತದೆ. ಹೈಕೋರ್ಟ್ ಜಡ್ಜ್ ಎದುರಿಗೆ ಯಾರು ಬಂದು ವಾದ ಮಾಡುವುದಿಲ್ಲ. ಅಂಥವರು ಅವರ ಕಣ್ಣಿಗೆ ಬೀಳುವುದಿಲ್ಲ.

SRI A. LAKSHMISAGAR.—Are you by this amending Bill. enunciating a principle that all those people who are practising in the District Court and mofussils should have pipe line to the High Court ? Are you enunciating that philosophy ? Then bring a Compremensive Bill for appointment of all the judges.

ಶ್ರೀ ಪೈ. ರಾಮಕೃಷ್ಣ.—ಅದನ್ನು ಮಾಡೋಣ.

ಶ್ರೀ ವಿ. ಲಕ್ಷ್ಮೀಸಾಗರ್,—ಮಾನ್ಯ ಕಾನೂನು ಮಂತ್ರಿಗಳು ಇವರ ಬಗ್ಗೆ ಪೂರ್ತಿಯಾಗಿ ವಿಚಾರ ಮಾಡಿದ್ದಾರೆಂದು ನನಗನಿಸುವುದಿಲ್ಲ. ಅವರು ನೇರವಾಗಿ ತಮಗೆ ಬೇಕಾದವರನ್ನು ನೇಮಕ ಮಾಡಿ ಕೊಳ್ಳುತ್ತೇವೆಂದು ಹೇಳಬಹುದಿತ್ತು. ಉದಾಹರಣೆಗೆ ಹೇಳುವುದಾದರೆ, ಕಕ್ಷಿಗಾರರು ತಮಗೆ ಇಷ್ಟ ಬಂದ ವಕೀಲರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಅಧಿಕಾರ ಇದೆಯೋ ಅದೇ ರೀತಿ ಸರ್ಕಾರವೂ ಕೂಡ ತನಗೆ ಬೇಕಾದ ವಕೀಲರನ್ನು ನೇಮಕ ಮಾಡಿಕೊಳ್ಳಬಹುದಿತ್ತು....

ಶ್ರೀ ಪೈ. ರಾಮಕೃಷ್ಣ.—ನಿಯಮಾವಳಿ ಪ್ರಕಾರ.

ಶ್ರೀ ವಿ. ಲಕ್ಷ್ಮೀಸಾಗರ್.—ಇಲ್ಲಿ ನಿಯಮ ಎಂಬುದು ಇಲ್ಲವೇ ಇಲ್ಲ. ನಾನು ಹೇಳುವುದನ್ನು ತಾವು ಸ್ವಲ್ಪ ಕೇಳಿ. He is not a litigant. But I am lawyer-litigant and I am a petitioner in several writ petitions now pending. I would like to go to a lawyer in whom I have confidence. If the Minister advances an argument that Government is a jurist person and therefore allows a private individual who is competent, who is entitled to have a counsel of his choice, I have no objection. But you do not put that argument on that footing You come across with a lame excuse that mofussil advocates practising in moffussil areas have not been able to get the position like the position of a Public prosecutor because of certain circumstances that existed in the practice now being followed by the Government and therefore you are bringing forward this Bill of amendment. The Hon'ble Minister does not say so. All that he has in mind is that he wants to prefer his own Bill. Some people are waiting and therefore they want to have an easy passage, direct passage, considered passage, irrespective of what High Court thinks about it. Put it like that. You are not finding proper or suitable persons with the consent or with the consultation of the High Court.

Sir, the hon'ble Minister has not been able to find fault with it and the deficiencies in it. Even now he can change his mind. There is no need for such an amendment at this stage. There have been instances of persons who are not generally practising in High Court having been appointed to the office of the public prosecutor. I don't want to mention their names because they are not the members of this House. You may be knowing. Therefore, it does not bring any credit to the Minister but on the contrary he will be blamed tomorrow for what he is doing now...

ಕಮಾರಿ ಎಸ್. ಪ್ರಮಿಳ.—ಮಾನ್ಯ ಅಧ್ಯಕ್ಷರೇ ಸೆಕ್ಷನ್ ೨೪ಕ್ಕೆ ಆಮೆಂಡ್‌ಮೆಂಟ್ ತರಬೇಕೆಂದು ಮಾಡಿದ್ದಿದ್ದೀರಿ. ಇದರಲ್ಲಿ ಇರತಕ್ಕಂಥದ್ದು ಏನೆಂದರೆ ಕನ್‌ಸಲ್ಟೇಷನ್ ಆಫ್ ದಿ ಹೈಕೊರ್ಟ್ ಎಂದು ಇವೆ ನಾನು ಕೂಡ ಹೈಕೋರ್ಟಿನಲ್ಲಿ ಪ್ರಾಕ್ಟೀಸ್ ಮಾಡಿರುತ್ತೇನೆ. ಆದ್ದರಿಂದ ಈ ಸಂದರ್ಭದಲ್ಲಿ ಎರಡು ಮಾತುಗಳನ್ನು ಹೇಳಿದರೆ ಅದು ಅನುಚಿತವಾಗುವುದಿಲ್ಲವೆಂದು ತಿಳಿದುಕೊಂಡಿದ್ದೇನೆ. ನ್ಯಾಯಾಧೀಶರಾಗಿ ಹೈಕೋರ್ಟ್‌ನಲ್ಲಿರತಕ್ಕಂಥವರು ಆ ಪ್ರಾಕ್ಟೀಸ್ ಮಾಡಿ ಆಡ್ವೊಕೇಟ್ ಆಗಿರತಕ್ಕಂಥವರೇ ಆಗಿರುತ್ತಾರೆ. ಇವರಲ್ಲಿ ಯಾರು ಫೂರ್ಣತರಾಗಿರುತ್ತಾರೆ ಕ್ರಿಮಿನಲ್ ಪ್ರೊಸೀಜರ್ ಕೋಡ್‌ನಲ್ಲಿ, ಅವರಲ್ಲೂ ಸರ್ಕಾರದ ಪಕ್ಷದ ಪರವಾಗಿ ಪ್ರಾಕ್ಟೀಸ್ ಮಾಡಿರತಕ್ಕಂಥವರು ಯಾರು ಇದ್ದಾರೆ. ಸಂಪೂರ್ಣ

ಮಾಹಿತಿ ಇರತಕ್ಕಂಥವರನ್ನು ಸ್ವಾಭಾವಿಕವಾಗಿ ನೀವು ತೆಗೆದುಕೊಳ್ಳಬೇಕಾಗಿದೆ ಉದಾಹರಣೆಗೆ ಹೇಳುವುದಾದರೆ ನಮ್ಮ ಮಂತ್ರಿಗಳು ಹೇಳಿದರು ಮಫ್ಲ್ಯೂಷಲ್ ಏರಿಯಾ ಇಂದ ತರುವುದಕ್ಕೆ ಒಂದು ಅನುಕೂಲ ಮಾಡಿದ್ದೇವೆಂದು ಹೇಳಿದರು. ಆದರೆ ನನಗೆ ಗೊತ್ತಿರುವಹಾಗೆ ೧೦-೧೫ ಮಂದಿ ಪ್ರಾಕ್ಟೀಸ್ ಮಾಡುವಾಗ ಶ್ರೀಮಾನ್ ವಾಲಿಯವರು ಧಾರವಾಡದಿಂದ ಬಂದರು. ಅವರು ಕೂಡ ಮಫ್ಲ್ಯೂಸಲ್ ಏರಿಯಾದಿಂದ ಬಂದದ್ದು. ಶ್ರೀಮಾನ್ ಬೈರಾರೆಡ್ಡಿ ಅವರನ್ನು ಕೋಲಾರದಿಂದ ತಂದದ್ದು ಎಲ್ಲರಿಗೂ ಗೊತ್ತಿರುತ್ತದೆ. ಪ್ರಾಸಿಕ್ಯೂಶನ್ ಮಾಡತಕ್ಕಂಥ ಸಂದರ್ಭದಲ್ಲಿ ಒಪೀನಿಯನ್ ಬರುತ್ತದೆ. ಚೆನ್ನಾಗಿ ಪ್ರಾಸಿಕ್ಯೂಟ್ ಮಾಡುತ್ತಾರೆ, ಯಾರು ಚೆನ್ನಾಗಿ ಕೇಸ್‌ಗಳನ್ನು ನಡೆಸುತ್ತಾರೆ ಎನ್ನುವುದಕ್ಕೆ ಸಂಪೂರ್ಣ ಮಾಹಿತಿ ಇದರಲ್ಲಿ ಇರುತ್ತದೆ. ಬಿ. ಕೆ. ರಾಮಚಂದ್ರರಾಯರನ್ನೂ ಕೂಡ ಮಫ್ಲ್ಯೂಶಲ್ ಏರಿಯಾದಿಂದಲೇ ತಂದದ್ದು. ಅವರೆಲ್ಲರೂ ಕೂಡ ಬೆಂಗಳೂರಿನಲ್ಲಿ ಇದ್ದಾರೆಂದು ಅವರಿಗೆ ಎನ್‌ಕರೇಜ್‌ಮೆಂಟ್ ಕೊಡುತ್ತೇವೆಂದು ಹೇಳಿ ಎರಡನೆಬಾರಿಗೆ ಅವಕಾಶ ಕೊಡಬೇಕು ಎನ್ನುವ ಅವಶ್ಯಕತೆ ಇರುತ್ತದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡಿ, ಹೈಕೋರ್ಟ್ ಹಿತದೃಷ್ಟಿಯಿಂದ ಸರ್ಕಾರದ ಹಿತದೃಷ್ಟಿಯಿಂದ ಸರ್ಕಾರವನ್ನು ಸೇಫ್‌ಗಾರ್ಡ್ ಮಾಡತಕ್ಕಂಥ ದೃಷ್ಟಿಯಿಂದ ಕನ್‌ಸಲ್ಟ್‌ಮಾಡಿ ಯಾರನ್ನಾದರೂ ತರಬಹುದು. ಇದರ ಬಗ್ಗೆ ವಿಚಾರಣೆ ಮಾಡಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ವೈ. ರಾಮಕೃಷ್ಣ.—ಮಾನ್ಯ ಅಧ್ಯಕ್ಷರೇ ಮೊದಲು ಸ್ಪಷ್ಟೀಕರಣ ಕೊಟ್ಟಿದ್ದೇನೆ. ಸಂಪೂರ್ಣವಾದ ಉತ್ತರವನ್ನು ಮಾನ್ಯ ಲಕ್ಷ್ಮೀಸಾಗರ್ ಅವರ ಅವಗಾಹನೆಗೆ ತಂದಿದ್ದೇನೆ. ಅವರು ಸರಿಯಾಗಿ ಅರ್ಥಮಾಡಿಕೊಂಡಿದ್ದರೆ ಈರೀತಿ ಹೇಳುತ್ತಿರಲಿಲ್ಲ. ನನ್ನ ಕಕ್ಷಿದಾರನನ್ನು ನಾನು ಹುಡುಕಿಕೊಳ್ಳತಕ್ಕಂಥ ಹಕ್ಕು ನನಗೆ ಇದ್ದೇ ಇದೆ ಎಂದು ಹೇಳಿದರು. ಅದನ್ನು ನನಗೆ ಏತಕ್ಕೆ ಹೇಳಿದರೋ ಗೊತ್ತಿಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ್.—ನಾವು ಹೇಳುತ್ತಿರುವುದು ನಿಮ್ಮ ಹಿತರಕ್ಷಣೆಗಾಗಿಯೇ ಹೇಳುತ್ತಿದ್ದೇವೆ. ಕಕ್ಷಿದಾರರಾಗಿ, ಸರ್ಕಾರಕ್ಕೆ ಅಡ್ವೊಕೇಟ್ ಆಗಿ ನೇಮಕ ಮಾಡಿಕೊಳ್ಳುವ ಹಕ್ಕು ನಿಮಗೆ ಇದೆ. ಅದಕ್ಕೋಸ್ಕರವಾಗಿ ಈ ಸದನದವನ್ನು ವಿಶ್ವಾಸಕ್ಕೆ ತೆಗೆದು ಕೊಳ ಬೇಕು. ನಾವು ಹೇಳುವುದೇನೆಂದರೆ ಸರ್ಕಾರದ ಹಿತರಕ್ಷಣೆಯಾಗುವಂಥ ಒಬ್ಬ ವಕೀಲ ನೇಮಕಗೊಳ್ಳಬೇಕಾದರೆ ಅದಕ್ಕೆ ಏನು ಬಂದೋಬಸ್ತು ಬೇಕು ಅದನ್ನು ಹೇಳಂತಿದ್ದೇನೆ. ಹೈಕೋರ್ಟ್‌ನ್ನು ಕನ್‌ಸಲ್ಟ್ ಮಾಡಿದರೆ ಏನು ತೊಂದರೆಯಾಗುತ್ತದೆ? ಹೈಕೋರ್ಟ್ ಕನ್‌ಸಲ್ಟ್‌ಮಾಡಿ. ನಿಮಗೆತೃಪ್ತಿಕರವಾಗದಿದ್ದರೆ ಬೇರೆಯವರನ್ನು ತೆಗೆದುಕೊಳ್ಳಲು ನಿಮಗೆ ಅಧಿಕಾರ ಇದ್ದೇ ಇದೆ. ಹೊಸದಾಗಿ ಪಡೆದುಕೊಳ್ಳತಕ್ಕಂಥದ್ದು ಏನೂ ಇಲ್ಲ. ಕನ್‌ಸಲ್ಟೇಷನ್‌ಗೆ ಅವಕಾಶವಿಲ್ಲದಿದ್ದರೆ ಏನು ಲಾಭವಿದೆ ? ಕನ್‌ಸಲ್ಟ್ ಮಾಡಿದರೆ ಹೈಕೋರ್ಟಿನವರು ಹೆಸರನ್ನು ಹೇಳುತ್ತಾರೆ. ಅದು ನಿಮಗೆ ತೃಪ್ತಿಯಾಗದಿದ್ದರೆ ನಿಮ್ಮ ದೃಷ್ಟಿಯಿಂದ ಪ್ರಾಕ್ಟೀಸ್ ಮಾಡತಕ್ಕಂಥವರು ಪ್ರುಸಿದ್ದಿ ಪಡೆದಂಥವರು ಇದ್ದರೆ ಇಟ್ಟುಕೊಳ್ಳಿ. ಅದನ್ನು ಮಾಡುವುದಕ್ಕೆ ಏನು ತೊಂದರೆ ಇದೆ.? You are not bound to accept what the High Court tells you. ಕನ್‌ಸಲ್ಟೇಷನ್ ಅನಿವಾರ್ಯವೆಂದು ಕೈಬಿಡಂತ್ತೇವೆಂದು ಹೇಳುವುದರ ಬಗ್ಗೆ ವಿವರಣೆ ಕೊಡಬೇಕೆಂದು ಕೇಳುತ್ತೇನೆ.

SRI A. LAKSHMISAGAR.—You can ask the Advocate General to put up a panel of names and he will do so. ಇದಕ್ಕೆಲ್ಲ ರೂಲ್ಸ್ ಇದೆ. ಇಷ್ಟುದಿವಸ ಪ್ರಾಕ್ಟೀಸ್ ಆಗಿರಲೇಬೇಕು, ಬಿ. ಎಲ್. ಓದಿರಲೇಬೇಕು. ೧೦ ವರ್ಷಗಳಕಾಲ ಪ್ರಾಕ್ಟೀಸ್ ಮಾಡಿರಬೇಕು, ಎಷ್ಟೋ ಕೇಸಸ್ ಕಂಡಕ್ಟ್‌ಮಾಡಿರಬೇಕೆಂದು ಇದೆಲ್ಲ ನಿಯಮಗಳು ಇರುತ್ತವೆ. ಇದೆಲ್ಲ ನೋಡಿಯೇ ಸರ್ಕಾರ ನೇಮಿಸತಕ್ಕಂಥದ್ದು ಇರುತ್ತದೆ.

ಶ್ರೀ ವೈ. ರಾಮಕೃಷ್ಣ.—೧೦ವರ್ಷ ಗಿ ವರ್ಷ ಆಗಿರುವವರನ್ನು ಕಳುಹಿಸಿಕೊಡಿ. ಸರ್ಕಾರ ಅವರ ಬಗ್ಗೆ ಪರಿಶೀಲನೆ ಮಾಡುತ್ತದೆ. ಕನ್‌ಸಲ್ಟೇಷನ್ ಇದೆಲ್ಲ ಮಾಡಬೇಕಾದರೆ ಆರು ತಿಂಗಳ ಕಾಲವಾದರೂ ತೆಗೆದುಕೊಳ್ಳುತ್ತದೆ. ಅದಕ್ಕೋಸ್ಕರವಾಗಿ ಸಿಂಪ್ಲಿಫೈ ಮಾಡುವುದಕ್ಕೋಸ್ಕರವಾಗಿ ಮಾಡಿದ್ದೇವೆಯೇ ಹೊರತು ಮತ್ತೇನು ಇಲ್ಲ. ಆದ್ದರಿಂದ ದಯವಿಟ್ಟು ನೀವು ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಯಾವುದೇ ಸಂದರ್ಭದಲ್ಲಿ ಹೈಕೋರ್ಟಿನಲ್ಲಿ ಡಿಲೆ ಮಾಡಿದ್ದರೆ, ಕಾಗದ ಬರೆದಿದ್ದರೆ ಅಂಥ ಒಂದು ಉದಾಹರಣೆಯನ್ನು ಕೊಡಿ. ಹೈಕೋರ್ಟಿನವರು ತಮಗೆ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿರುವುದಕ್ಕೆ ತಾವು ಉದಾಹರಣೆ ಕೊಡುವುದಕ್ಕೆ ಸಾಧ್ಯವೆ ಎಂದು ಕೇಳುತ್ತೇನೆ.

ಶ್ರೀ ವೈ. ರಾಮಕೃಷ್ಣ.—ಒಂದು ಉದಾಹರಣೆ ಹೇಳುತ್ತೇನೆ ಮುನಸೀಫರನ್ನು ನೇಮಕ ಮಾಡಬೇಕೆಂದು ಈ ಮನೆಯಲ್ಲಿ ಪ್ರಶ್ನೆಯನ್ನು ಎತ್ತಿದಾಗ ರಿಸರ್ವೇಷನ್ ಕ್ವಶ್ಚನ್ ಬರಲಿಲ್ಲವೆ:, ಬ್ಯಾಕ್‌ವರ್ಡ್ ಕ್ವಶ್ಚನ್ ಬರಲಿಲ್ಲವೇ ?

ಶ್ರೀ ಕೆ. ಎಚ್. ಶ್ರೀನಿವಾಸ್.—ಇದಕ್ಕೊಸ್ಕರವಾಗಿ ನೇರವಾಗಿ ಅಪಾಯಿಂಟ್ ಮಾಡುತ್ತೇವೆಂದು ಹೇಳುವುದಾದರೆ ಈ ಬಗ್ಗೆ ದಯವಿಟ್ಟು ಸರಿಯಾದ ಸಮರ್ಥನೆಯನ್ನು ಕೊಡಿ.

ಶ್ರೀ ವೈ. ರಾಮಕೃಷ್ಣ.—ತೃಪ್ತಿಕರವಾದ ಸಮರ್ಥನೆ ಕೊಟ್ಟಿದ್ದೇನೆ. ಇದಕ್ಕಿಂತಲು ಹೆಚ್ಚಿಗೆ ಸಮರ್ಥನೆ ಕೊಡಬೇಕೆಂದರೆ ನನ್ನ ಕೈಯಲ್ಲಿ ಆಗುವುದಿಲ್ಲ. ಗೌವರ್ನಮೆಂಟ್ ಆಫ್ ಇಂಡಿಯಾದ ವರೂ ಕೂಡ ಪರ್ಮಿಷನ್ ಕೊಟ್ಟಿರುತ್ತಾರೆ. ಪ್ರೆಸಿಡೆಂಟರೂ ಕೂಡ ಒಪ್ಪಿದ್ದಾರೆ. ನಾವು ರೂಲ್ಸ್ ಮಾಡಿಕೊಟ್ಟಿದ್ದೇವೆ. ರೂಲ್ಸ್ ಪ್ರಕಾರ ಅಪಾಯಿಂಟ್ ಮಾಡಬೇಕು. ಇದರಲ್ಲಿ ಯಾರನ್ನು ಮಾಡಬೇಕು ಎನ್ನುವ ಬಗ್ಗೆ ಅಲ್ಲಿರತಕ್ಕಂಥ ಪರಿಣತರನ್ನು ಅಂದರೆ ಮಫ್ಯೂಸಲ್ ಏರಿಯಾದಿಂದ ಬರತಕ್ಕಂಥವರಿಗೂ ಒಂದು ಅವಕಾಶಕೊಡಬೇಕೆಂದು ಈ ಅಮೆಂಡ್‌ಮೆಂಟನ್ನು ತಂದಿದ್ದೇವೆ. ಏತಕ್ಕೆಂದರೆ ಯಾರು ಸೆಷನ್ ಕೋರ್ಟಿನಲ್ಲಿ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಕೇಸನ್ ಡೀಲ್ ಮಾಡಿರುತ್ತಾರೋ ಅಂಥವರಿಗೆ ಅವಕಾಶ ಸಿಕ್ಕದೆ ಹೋಗಬಹುದು ಎನ್ನುವ ದೃಷ್ಟಿಯಿಂದ ಅವರಿಗೂ ಒಂದು ಅವಕಾಶ ಸಿಕ್ಕಲಿ ಎನ್ನುವ ದೃಷ್ಟಿಯಿಂದ ಇದನ್ನು ತಂದಿದ್ದೇವೆ. ದಯವಿಟ್ಟು ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

MR. DEPUTY SPEAKER.—The question is;

"that the Code of Criminal Procedure (Amendment) Bill, 1982 be taken into consideration".

The Motion was adopted

MR. DEPUTY SPEAKER.—Now I shall put clauses to vote

CLAUSE 2

MR. DEPUTY SPEAKER.—The question is.

"that clause 2, do stand part of the Bill".

The Motion was adopted

Clause 2 was added to the Bill

CLAUSE 1 ETC.

MR. DEPUTY SPEAKER.—The question is :

"that clause 1, the long title, the preamble and the enacting formula, do stand part of the Bill".

The motion was adopted

Clause 1, the Long Title, the Preamble, and the Enacting Formula were added to the Bill.

Motion to pass

SRI Y. RAMAKRISHNA.—Sir, I move.

"that the Code of Criminal Procedure (Amendment) Bill, 1982, be passed"

MR. DEPUTY SPEAKER.—The question is.

"that the Code of Criminal Procedure (Amendment) Bill, 1982 be passed."

SRI A. LAKSHMISAGAR.—Sir, even now it is not too late. My learned friend may reconsider his opinion. He has gone on getting brain waves and getting new ideas and after thoughts. As he said, delay was the main reason which prompted them to come forward with this Bill. But he has not been able to substantiate the instances where the High Court has delayed the matter.

MR. DEPUTY SPEAKER.—The hon'ble Minister has already answered on that point.

5-30 P. M.

SRI A. LAKSHMISAGAR.—Sir, this is the second stage of the Bill and I have a right to plead with them even now. The other point is delay. There cannot be any delay. After appointment the incumbent in office cannot throw his resignation letter and go away till a new person takes over that job.

SRI BHASKAR NAIDU.—Sir, I raise a point of order. How can there be a discussion now at this stage ?

Interruptions

SRI A. LAKSHMISAGAR.—It is permitted under the rules.

MR DEPUTY SPEAKER.—Yes.

SRI A. LAKSHMISAGAR.—It is according to rules. Therefore I do hope and I still plead with the Minister for Law to re-consider.

SRI P. VENKATARAMANA.—The Bill is being passed now and this is not a good convention.

SRI A. LAKSHMISAGAR.—One difficulty with the Hon. Minister Sri Venkataramana is that he has completely forgotten that he was a Presiding Officer. During his tenure itself I had occasion to try to persuade even at this late stage. It is provided under the rule.

SRI Y. RAMAKRISHNA.—No new point has been made.

SRI A. LAKSHMISAGAR.—I need not make out a new point. But I can still persuade.

SRI Y. RAMAKRISHNA.—No amount of persuasion will convince me.

SRI A. LAKSHMISAGAR.—If he has made up his mind, I cannot help.

MR. DEPUTY SPEAKER.—The question is.

"that the Code of Criminal Procedure (Karnataka Amendment) Bill, 1981, be passed."

The motion was adopted and the Bill was passed.

THE KARNATAKA PROHIBITION OF BEGGARY (AMENDMENT) BILL, 1982.

Motion to Consider

SRI P. VENKATARAMANA (Minister for Social Welfare and Backward Classes).—Sir, I beg to move;

"That the Karnataka Prohibition of Beggary (Amendment) Bill, 1982, be taken into consideration."

The Question was Proposed

ಶ್ರೀ ಪಿ. ವೆಂಕಟರಮಣ.—ಸನ್ಮಾನ್ಯ ಉಪಾಧ್ಯಕ್ಷರೇ ಆರ್ಡಿನೆನ್ಸ್‌ಬರ್‌ನಲ್ಲಿ ಹೊರಡಿಸಿರತಕ್ಕ ಆರ್ಡಿನೆನ್ಸ್ ರಿಪ್ಲೇಸ್ ಮಾಡಲು ತಂದಿರತಕ್ಕ ಮಸೂದೆ. ಸೆಕ್ಷನ್ ನಾಲ್ಕರಲ್ಲಿ ಒಂದು ಕಮಿಟಿಯನ್ನು ಮಾಡಿ : "for sub-sections (2), (3), (4), (5) and (6) of the following sub-sections shall be substituted" ಕಮಿಟಿಯನ್ನು ಮಾಡತಕ್ಕ ಕ್ಲಾಲದಲ್ಲಿ ಒಬ್ಬರು ಛೇರ್‌ಮೆನ್ನರು ಇರುತ್ತಾರೆ ಕಮಿಟಿಯ ಸದಸ್ಯರಲ್ಲಿ ಯಾರನ್ನಾದರೂ ಛೇರ್‌ಮನ್ನಾಗಿ ಮಾಡಬಹುದು. ಆ ಕಮಿಟಿಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶಕರು ಮತ್ತು ಸಮಾಜ ಕಲ್ಯಾಣ ಕಾರ್ಮಿಕ ಇಲಾಖೆಯ ಕಾರ್ಯದರ್ಶಿಗಳು, ಹಣಕಾಸು ಇಲಾಖೆಯ ಕಾರ್ಯದರ್ಶಿಗಳು ಮತ್ತು ನಾಲ್ಕು ಜನ ನಾನ್ ಆಫೀಶಿಯಲ್ ಸದಸ್ಯರುಗಳು ಇರುತ್ತಾರೆ. ಈ ಸದಸ್ಯರ ಪೈಕಿ ಯಾರನ್ನಾದರೂ ಅಧ್ಯಕ್ಷರನ್ನಾಗಿ ನೇಮಕ ಮಾಡಿಕೊಳ್ಳಲು ಅವಕಾಶ ಇದೆ. ಈ ಸಮಿತಿ ಇರುವುದರಿಂದ ಕೆಲಸ ಮಾಡಲು ಮಾರ್ಗದರ್ಶನ ನೀಡುತ್ತದೆ. ಈ ತಿದ್ದುಪಡಿ ತಂದ ಉದ್ದೇಶವೇನೆಂದರೆ ಭಿಕ್ಷುಕರನ್ನು ಸಮ್ಮ ಸಂಸ್ಥೆಯಲ್ಲಿ ೬ ತಿಂಗಳು ಇಟ್ಟುಕೊಳ್ಳಲು ಅವಕಾಶವಿದೆ. ೬ ತಿಂಗಳಾದ ಮೇಲೆ ಅವರನ್ನು ಬಿಟ್ಟುಬಿಡುತ್ತೇವೆ ನಂತರ ಆ ಭಿಕ್ಷುಕನು ಅದೇ ವೃತ್ತಿಯನ್ನು ಹಿಡಿಯುತಕ್ಕ ಅವಕಾಶವಿದೆ. ಆದ್ದರಿಂದ ೧೨ ತಿಂಗಳು ಇಟ್ಟುಕೊಳ್ಳಲು ಅವಕಾಶ ಮಾಡಬೇಕೆಂದು ಈ ಒಂದು ತಿದ್ದುಪಡಿಯನ್ನು ತಂದಿದ್ದೇನೆ. ಸೆಂಟ್ರಲ್ ರಿಲೀಫ್ ಕಮಿಟಿ ಎಂದು ಹೇಳಿ ಅದರಲ್ಲಿ ಫೈನಾನ್ಸ್ ಸೆಕ್ರೆಟರಿ, ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶಕರು ಸದಸ್ಯರುಗಳಾಗಿ ಇರುತ್ತಾರೆ. ಆ ಸಮಿತಿಯು ಎಲ್ಲೆಲ್ಲಿ ಎಷ್ಟೆಷ್ಟು ಹಣವನ್ನು ಖರ್ಚುಮಾಡಬೇಕೆಂದು ನಿರ್ಧಾರ ಮಾಡಿಕೊಳ್ಳುತ್ತದೆ. ಆ ಸಮಿತಿಯು ಪರಿಣಾಮಕಾರಿಯಾಗಿ ಕೆಲಸ ಮಾಡಲು ಕಾರ್ಯಗತಗೊಳಿಸಬೇಕೆಂದು ಹೇಳಿ ಈ ಒಂದು ತಿದ್ದುಪಡಿಯನ್ನು ತಂದಿದ್ದೇನೆ. ಇದು ಅಗತ್ಯವಾಗಿದೆ, ಮಾನ್ಯ ಸದಸ್ಯರೆಲ್ಲರೂ ದಯಮಾಡಿ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಮಳ್ಳೂರು ಆನಂದರಾವ್.—ಈ ಒಂದು ಮಸೂದೆಯನ್ನು ಮಾನ್ಯ ಮಂತ್ರಿಗಳು ಸಭೆ ಒಪ್ಪಿಗೆ ಕೊಡಬೇಕೆಂದು ಇಟ್ಟಿದ್ದಾರೆ. ಅವರ ಉದ್ದೇಶವನ್ನು ಸ್ಪಷ್ಟ ಮಾಡಿದ್ದಾರೆ. ಎಫೆಕ್ಟೀವ್ ಇಂಪ್ಲಿಮೆಂಟೇಷನ್ ಮಾಡುವ ದೃಷ್ಟಿಯಿಂದ ಒಂದು ರಿಲೀಫ್ ಕಮಿಟಿಗೆ ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಭಿಕ್ಷುಕರನ್ನು ಕೂಡಿ ಹಾಕಿದಮೇಲೆ ಬಿಟ್ಟರೆ ಅವರು ಪುನಃ ಅದೇ ವೃತ್ತಿಯನ್ನು ಮಾಡುತ್ತಾರೆ ಆದ್ದರಿಂದ ಇನ್ನೊಂದು ಆರು ತಿಂಗಳು ಅಲ್ಲೆ ಇಟ್ಟುಕೊಳ್ಳಬೇಕೆಂದು ಹೇಳಿದ್ದಾರೆ. ಮಾನ್ಯ ಮಂತ್ರಿಗಳು ಏನು ತಿದ್ದುಪಡಿಯನ್ನು ತಂದಿದ್ದಾರೆ ಅದು ಬಹಳ ಮಹತ್ವದ್ದು ಮತ್ತು ಉಪಯುಕ್ತವಾದದ್ದು ಆ ಒಂದು ಕಾರ್ಯಕ್ರಮವನ್ನು ಜಾರಿಗೆ ತಂದುಕೊಂಡಿದ್ದಾರೆ ಆದರೆ ಒಪ್ಪಿಗೆ ಕೊಡುವುದಕ್ಕೆ ಮುಂಚೆ ಒಂದೆರಡು ಅಂಶಗಳ ಬಗ್ಗೆ ವಿಚಾರ ಮಾಡಬೇಕು ಅನ್ನಿಸುತ್ತದೆ. 'ಪ್ರಾಯಿಬಿಷನ್ ಆಫ್ ಬೆಗ್ಗರಿ ಆಕ್ಟ್' ಜಾರಿ